'ಮಿಸ್ ಕರ್ನಾಟಕ' ಸ್ಪರ್ಧೆಯಲ್ಲಿ ಭಾಗವಹಿಸಿ ಆ ಕಿರೀಟವನ್ನೂ ಮುಡಿಗೇರಿಸಿಕೊಂಡರು. 'ಅದೇ ನನ್ನೊಳಗೆ ನಟಿಯಾಗಬೇಕು ಎಂಬ ಹಂಬಲವನ್ನು ತೀವ್ರಗೊಳಿಸಿದ್ದು' ಎಂದು ನೆನಪಿಸಿಕೊಳ್ಳುತ್ತಾರೆ ಅವರು. ನಂತರ ಹಲವು ಸೌಂದರ್ಯಸ್ಪರ್ಧೆಗಳಲ್ಲಿ ಭಾಗವಹಿಸಿ ಗೆದ್ದಿದ್ದಾರೆ.

ಕಳೆದ ಆಗಸ್ಟ್‌ನಲ್ಲಿ ಎಂಜಿನಿಯರಿಂಗ್ ಕೊನೆಯ ವರ್ಷದ ಪರೀಕ್ಷೆ ಬರೆದಿರುವ ಅವರು ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸಕ್ಕೂ ಆಯ್ಕೆಯಾಗಿದ್ದಾರೆ. ಆದರೆ ಅವರ ಗಮನವೆಲ್ಲ ಈಗ ನಟನೆಯ ಮೇಲಿದೆ. ಹಾಗಾಗಿ ಕೆಲಸಕ್ಕೆ ಸೇರಿಕೊಳ್ಳುವ ನಿರ್ಧಾರವನ್ನು ಕೈಬಿಟ್ಟಿದ್ದಾರೆ. 'ನಟನೆಯನ್ನೇ ಪ್ಯಾಷನ್ ಮತ್ತೆ ಪ್ರೊಫೆಷನ್ ಆಗಿ ತೆಗೆದುಕೊಳ್ಳುವ ತೀರ್ಮಾನ ಮಾಡಿದ್ದೇನೆ. ಇದರ ಮೂಲಕವೇ ನನ್ನೊಳಗಿನ ಸೃಜನಶೀಲತೆ ಮತ್ತು ಪ್ರತಿಭೆಯನ್ನು ವಿಸ್ತರಿಸಿಕೊಳ್ಳುತ್ತೇನೆ' ಎನ್ನುತ್ತಾರೆ ಯಶಾ.

ಎಂಜಿನಿಯರಿಂಗ್ ಕೊನೆಯ ಸೆಮಿಸ್ಟರ್ ಪರೀಕ್ಷೆಯ ಸಮಯದಲ್ಲಿಯೇ ಅವರು ತುಳು ಸಿನಿಮಾವೊಂದರಲ್ಲಿಯೂ ನಾಯಕಿಯಾಗಿ ನಟಿಸಲು ಆಯ್ಕೆಯಾಗಿದ್ದಾರೆ. 'ಒಂದು ಮೊಟ್ಟೆಯ ಕಥೆ' ಸಿನಿಮಾ ತಂಡವೇ ಸೇರಿಕೊಂಡು ಮಾಡುತ್ತಿರುವ 'ರಾಜ್ ಸೌಂಡ್ ಆ್ಯಂಡ್ ಲೈಟ್' ಎಂಬ ತುಳು ಸಿನಿಮಾ ಅವರ ನಟನೆಯ ಮೊದಲ ಸಿನಿಮಾ. ಈ ಸಿನಿಮಾ ಚಿತ್ರೀಕರಣದಲ್ಲಿದ್ದಾಗಲೇ ಅವರಿಗೆ ಯೋಗರಾಜ್ ಬ್ಯಾನರ್ ಅಡಿಯಲ್ಲಿ ತಯಾರಾಗುತ್ತಿರುವ 'ಪದವಿಪೂರ್ವ' ಸಿನಿಮಾದಲ್ಲಿ ನಟಿಸುವ ಅವಕಾಶವೂ ದೊರಕಿದೆ. 'ತುಳು ಮತ್ತೆ ಕನ್ನಡ ಎರಡೂ ಭಾಷೆಗಳಲ್ಲಿ ನನಗೆ ತುಂಬ ಒಳ್ಳೆಯ ಪ್ರವೇಶವೇ ದೊರಕುತ್ತಿದೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. 'ಪದವಿಪೂರ್ವ' ಸಿನಿಮಾದಲ್ಲಿ ಅವರು ಶಿಸ್ತಿನ ವಿದ್ಯಾರ್ಥಿಯಾಗಿ ಸ್ನೇಹಿತರಿಗೆಲ್ಲ ಬುದ್ಧಿವಾದ ಹೇಳುವ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರಂತೆ.

'ಎಲ್ಲ ನಟರ ಜೊತೆಗೂ ತೆರೆಯನ್ನು ಹಂಚಿಕೊಳ್ಳಬೇಕು. ಎಲ್ಲ ಬಗೆಯ ಪಾತ್ರದಲ್ಲಿಯೂ ನಟಿಸಬೇಕು' ಎನ್ನುವ ಯಶಾ ಅವರಿಗೆ, ಹಿಸ್ಟಾರಿಕಲ್ ಮತ್ತು ಬಯೊಪಿಕ್ ಸಿನಿಮಾಗಳಲ್ಲಿ ನಟಿಸುವ ಹಂಬಲ ಇದೆ. ಹೆಸರಿನಲ್ಲಿನ ಯಶ ಬದುಕಿಗೂ ಅನ್ವರ್ಥವಾಗುತ್ತದೆ ಎಂಬ ನಂಬಿಕೆಯಲ್ಲಿ ಅವರು ಹಂಬಲದ ಕಣ್ಣಿನಿಂದ ಚಂದನವನದ ಹೆಬ್ಬಾಗಿಲಲ್ಲಿ ನಿಂತು ನೋಡುತ್ತಿದ್ದಾರೆ. ■

# ಹೊಸ ಅವತಾರದಲ್ಲಿ ವಸಿಷ್ಠ



ವಸಿಷ್ಠ ಸಿಂಹ

ಕೊರೊನಾ ನಂತರ ವಸಿಷ್ಠ ಸಿಂಹ ಅವರ ಗ್ರಾಫ್ ಏರುಗತಿಯಲ್ಲಿ ಸಾಗುತ್ತಿರುವಂತಿದೆ. ಈಗಾಗಲೇ ಅವರು ನಟಿಸಿರುವ 'ಕಾಲಚಕ್ರ' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಆ ಸಿನಿಮಾದಲ್ಲಿ ಅವರು ಹಲವು ಗೆಟಪ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು, ಕುತೂಹಲ ಹುಟ್ಟಿಸಿದೆ. ಇತ್ತೀಚೆಗೆ ಅವರು ನಾಯಕನಾಗಿ ನಟಿಸಿರುವ ಇನ್ನೊಂದು ಸಿನಿಮಾ ಸೆಟ್ಟೇರಿದೆ. ಈ ಸಿನಿಮಾದ ತಂಡವೇ ಸಿನಿಮಾ ಕುರಿತು ಕುತೂಹಲ ಹುಟ್ಟಿಸುವ ಹಾಗಿದೆ.

ವಚನ್ ಈ ಸಿನಿಮಾ ಮೂಲಕ ನಿರ್ದೇಶಕನಾಗಿ ಪರಿಚಿತರಾಗುತ್ತಿದ್ದಾರೆ. ಕಥೆ, ಚಿತ್ರಕಥೆಯೂ ಅವರದೇ. ಈ ಹಿಂದೆ ಪವನ್ ಕುಮಾರ್ ಅವರ 'ಲೂಸಿಯಾ' ಸಿನಿಮಾಗೆ ಇವರು ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದರು. ಇದೇ ಮೊದಲ ಬಾರಿಗೆ ಸ್ವತಂತ್ರವಾಗಿ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. 'ಟಗರು' ಖ್ಯಾತಿಯ ಮಾಸ್ತಿ ಈ ಸಿನಿಮಾಗೆ ಸಂಭಾಷಣೆಗಳನ್ನು ಬರೆಯುತ್ತಿದ್ದಾರೆ. ಅನೂಪ್ ಸೀಳಿನ್ ಸಂಗೀತ ನಿರ್ದೇಶನ, 'ಮಫ್ತಿ' ಖ್ಯಾತಿಯ ನವೀನ್ ಕುಮಾರ್ ಛಾಯಾಗ್ರಹಣ ಈ ಸಿನಿಮಾಕ್ಕಿದೆ.



ವಚನ್

ಸಿನಿಮಾದ ಕಥೆಯ ಸ್ವರೂಪ, ಪ್ರಕಾರಗಳ ಕುರಿತು ಚಿತ್ರತಂಡ ಇನ್ನೂ ಗುಟ್ಟು ಬಿಟ್ಟುಕೊಟ್ಟಿಲ್ಲ. ಸಿನಿಮಾ ಶೀರ್ಷಿಕೆಯನ್ನೂ ಇದುವರೆಗೆ ಜಾಹೀರು ಮಾಡಿಲ್ಲ. ವಸಿಷ್ಠ ಸಿಂಹ ಅವರ ಜೊತೆಗೆ ನಟ ಕಿಶೋರ್ ಕೂಡ ಒಂದು ಮುಖ್ಯಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

'ಇದೊಂದು ಪೊಲೀಸ್ ಥ್ರಿಲ್ಲರ್ ಕಥೆ. ಆದರೆ ಖಂಡಿತವಾಗಿಯೂ ಮಾಮೂಲಿ ಮಾದರಿಯ ಕಥೆ ಅಲ್ಲ. ಇತಿಹಾಸದ ಜೊತೆಗೆ ವರ್ತಮಾನವನ್ನು ಸೇರಿಸಿ ಬಿಗಿಯಾಗಿ ಹೆಣೆದಿರುವ ಕಥೆ. ಪೊಲೀಸ್ ವ್ಯವಸ್ಥೆಯ ಹಲವು ಭಿನ್ನ ಆಯಾಮಗಳನ್ನು ಮನರಂಜನೆಯ ಜೊತೆಗೇ ತೋರಿಸುವುದು ಈ ಸಿನಿಮಾದ ವಿಶೇಷ' ಎಂಬುದು ಚಿತ್ರತಂಡದ ವಿವರಣೆ. ■

# ಲಿಪಿಕಾರ ಕನ್ನಡಿಗ!



'ಕನ್ನಡಿಗ' ಚಿತ್ರತಂಡ

'ಜಟ್ಟ', 'ಮೈತ್ರಿ', 'ಅಮರಾವತಿ'ಗಳಂಥ ಸೂಕ್ಷ್ಮ ಸಂವೇದನೆಯ ಸಿನಿಮಾಗಳನ್ನು ಕೊಟ್ಟಿರುವ ಬಿ.ಎಂ. ಗಿರಿರಾಜ್ ಈಗ ಹೊಸದೊಂದು ಸಾಹಸಕ್ಕೆ ಮುಂದಾಗಿದ್ದಾರೆ. ಈ ಸಾಹಸದ ಹೆಸರು 'ಕನ್ನಡಿಗ'. ಹೌದು, ಗಿರಿರಾಜ್ ನಿರ್ದೇಶಿಸುತ್ತಿರುವ ಹೊಸ ಸಿನಿಮಾದ ಹೆಸರು 'ಕನ್ನಡಿಗ'. ಕನ್ನಡಿಗ ಎಂಬ ಹೆಸರಿನ ಸಿನಿಮಾ ಮಾಡುವುದೇನು ಅಂಥ ಸಾಹಸವೇ ಎಂದು ಕೇಳಬೇಡಿ. ಇವನು ಸಮಕಾಲೀನ ಕನ್ನಡಿಗ ಅಲ್ಲ. 19ನೇ ಶತಮಾನದ ದ್ವಿತಿಯಾರ್ಧದಲ್ಲಿ ಬದುಕಿದ ಕನ್ನಡಿಗ. ಹಾಗಾದರೆ ಇದೇನು ಕನ್ನಡ ಸಾಮ್ರಾಜ್ಯದ ರಾಜರ ಕಥೆಯೇ? ಖಂಡಿತ ಅಲ್ಲ. ರಾಜರ ಕಾಲದ ಸಾಮಾನ್ಯ ಲಿಪಿಕಾರನೊಬ್ಬನ ಕಥೆ.

ಇಷ್ಟಕ್ಕೇ ಈ ಚಿತ್ರದ ವಿಶೇಷ ಮುಗಿಯುವುದಿಲ್ಲ. ರವಿಚಂದ್ರನ್ ಈ ಸಿನಿಮಾದಲ್ಲಿ ಲಿಪಿಕಾರನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಗುಣಭದ್ರ ಎನ್ನುವುದು ಅವರ ಪಾತ್ರದ ಹೆಸರು. ನಾಯಕಿ ಪಾವನಾ. ಸಂಕಮ್ಮಬ್ಬೆಯಾಗಿ ಸ್ವಾತಿ ಚಂದ್ರಶೇಖರ್ ಅವರೂ, ಕಿಟ್ಟೆಲ್ ಪಾತ್ರದಲ್ಲಿ ಜೆಮಿ ವಾಲ್ಡರ್ ಅವರೂ, ಕುಮಾರಿಲ ಭಟ್ಟನಾಗಿ ಗುರುದತ್ ಮತ್ತು ಮಲ್ಲಿನಾಥನಾಗಿ ಬಾಲಾಜಿ ಮನೋಹರ್ ನಟಿಸಲಿದ್ದಾರೆ. ದತ್ತಣ್ಣ ಮತ್ತು ಅಚ್ಯುತ್ ಕುಮಾರ್ ಕೂಡ ಮುಖ್ಯಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಹಿಂದಿನ ಕಾಲಘಟ್ಟವನ್ನು ತಮ್ಮ ಕಲಾಕಾರಿಕೆಯ ಕಲ್ಪನೆಯಲ್ಲಿ ಮರುಸೃಷ್ಟಿಸುವ ಹೊಣೆಯನ್ನು ಹೊಸ್ಮನೆ ಮೂರ್ತಿ ವಹಿಸಿಕೊಂಡಿದ್ದಾರೆ. ಈಗಾಗಲೇ ಚಿತ್ರದ ಮುಹೂರ್ತ ನೆರವೇರಿದೆ. ನವೆಂಬರ್ ತಿಂಗಳಲ್ಲಿ ಮೊದಲ ಹಂತದ ಚಿತ್ರೀಕರಣ ಆರಂಭಿಸಿ, ಬಹುತೇಕ ಚಿತ್ರೀಕರಣ ಮುಗಿಸಿಕೊಳ್ಳುವ ಯೋಜನೆಯಲ್ಲಿ ಚಿತ್ರತಂಡವಿದೆ. ಜಿ.ಎಸ್.ವಿ. ಸೀತಾರಾಮ್ ಛಾಯಾಗ್ರಹಣ, ರವಿ ಬಸ್ರೂರ್ ಸಂಗೀತ ಚಿತ್ರಕ್ಕಿದೆ. ಎನ್.ಎಸ್. ರಾಜಕುಮಾರ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ■